ಬರಬಹುದು. ಆದ್ದರಿಂದ ಸರ್ಕಾರದವರು ಆತನ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ ಜಿಗಜಿಣಗಿ.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ನಾನು ವರದಿಯನ್ನು ತರಿಸಿ ನೋಡುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ, ಒಂದು ವರದಿಯನ್ನು ತರಿಸಬೇಕಾದರೆ ಎಷ್ಟು ದಿವಸಗಳು ಬೇಕು. ನಾನು 15 ದಿವಸಗಳ ಹಿಂದೆಯೇ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಆದರೆ ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ.

ಅಧ್ಯಕ್ಷರು.—ವರದಿಯನ್ನು ತರಿಸುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಅವರು ವರದಿಯನ್ನು ತರಿಸಲಿ.

(ii) ಕುಂದಾಪುರ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಅಧ್ಯಾಪಕರುಗಳ ಭರ್ತಿ

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನಲ್ಲಿ ಸರ್ಕಾರದವರು ಈ ವರ್ಷ ಸುಮಾರು 25 ಹೊಸ ಶಾಲೆಗಳನ್ನು ತೆರೆದಿದ್ದಾರೆ. ಆದರೆ ಆ ಶಾಲೆಗಳಿಗೆ ಪಕ್ಕದ ಹಳ್ಳಿಯ ಶಾಲೆಗಳಿಂದ ಡೆಪ್ಯುಟೇಷನ್ ಮೂಲಕ ಕಳುಹಿಸಿಕೊಟ್ಟಿದ್ದಾರೆ. ಅಲ್ಲಿ ಈಗ ಉಪಾಧ್ಯಾಯರ ಕೊರತೆ ಇದೆ. ಆದರಲ್ಲಿ ಈಗ ಮಾನ್ಯ ಮಂತ್ರಿಗಳು ಹೊಸ ಶಾಲೆಗಳನ್ನು ತೆರೆದಿದ್ದಾರೆ. ಮತ್ತೆ ಆ ಶಾಲೆಗಳನ್ನು ನಡೆಸುವುದಕ್ಕೆ ಸರಿಯಾದಂಥ ಕಟ್ಟಡಗಳೂ ಸಹ ಇಲ್ಲದೆ ಜೋಪಡಿಗಳಲ್ಲಿ ನಡೆಸುತ್ತಿದ್ದಾರೆ. ಆದ್ದರಿಂದ ನಮ್ಮ ತಾಲ್ಲೂಕಿನಲ್ಲಿರತಕ್ಕಂಥ ಉಪಾಧ್ಯಾಯರ ಕೊರತೆಯನ್ನು ಮತ್ತು ಶಾಲೆಗಳಿಗೆ ಕಟ್ಟಡಗಳು ಇಲ್ಲದೆ ಇರುವುದರಿಂದ ಮಾನ್ಯಮಂತ್ರಿಗಳು ಯಾವ ಕ್ರಮವನ್ನು ತೆಗೆದುಕೊಂಡಿದ್ದಾರೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಹೊಸದಾಗಿ ಶಾಲೆಗಳನ್ನು ತೆರೆದಿರುವುದು ನಿಜ. ಆದರೆ ಬೇರೆ ಶಾಲೆಗಳಿಗೆ ಇರುವಂತೆ ಅಲ್ಲಿ ಕೂಡ ಉಪಾಧ್ಯಾಯರ ಕೊರತೆ ಇದೆ. ಮತ್ತೆ ನಾವು ಪ್ರೌಢ ಶಾಲೆಗಳಿಗೆ ಉಪಾಧ್ಯಾಯರನ್ನು ಭರ್ತಿ ಮಾಡಿಕೊಳ್ಳುವುದಕ್ಕೆ ಇವತ್ತು ಲೋಕಸೇವಾಆಯೋಗದವರು ಸಂದರ್ಶನವನ್ನು ನಡೆಸುತ್ತಿದ್ದಾರೆ. ಇನ್ನು ಒಂದು ತಿಂಗಳಲ್ಲಿ ಎಲ್ಲಾ ಪ್ರೌಢ ಶಾಲೆಗಳಿಗೆ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುತ್ತೇವೆ. ಮತ್ತೆ ಪ್ರಾಥಮಿಕ ಶಾಲೆಗಳಿಗೆ ಡೈರೆಕ್ಟ್ ಆಗಿ ಭರ್ತಿ ಮಾಡಿಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ.

(iii) ಸಿಹಿಮೂತ್ರ ರೋಗಿಗಳಿಗೆ ಒದಗಿಸಬೇಕಾದ ಚಿಕಿತ್ಸಾ ಸೌಲಭ್ಯ

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು 10–15 ಲಕ್ಷ ಜನ ಸಿಹಿಮೂತ್ರ ರೋಗದಿಂದ ನರಳುತ್ತಿದ್ದಾರೆ. ಮತ್ತೆ ನಮ್ಮ ಶಾಸಕರ ಭವನದಲ್ಲಿರತಕ್ಕಂಥ ಶಾಸಕರೂ ಕೂಡ ಸುಮಾರು 50 ಪರ್ಸೆಂಟ್ ಶಾಸಕರು ಈ ಸಿಹಿಮೂತ್ರ ರೋಗದಿಂದ ನರಳುತ್ತಿದ್ದಾರೆ. ಮತ್ತೆ ನಗರದಲ್ಲಿ ಕೂಡ ಸುಮಾರು 30 ಪರ್ಸೆಂಟ್ ಜನರು ಈ ಸಿಹಿಮೂತ್ರ ರೋಗದಿಂದ ನರಳುತ್ತಿದ್ದಾರೆ. ಮತ್ತೆ ಹಳ್ಳಿಗಾಡು ಪ್ರದೇಶಗಳಲ್ಲಿ ಶೇಕಡ 3ರಷ್ಟು ಜನ ಈರೋಗದಿಂದ ನರಳುತ್ತಿದ್ದಾರೆ. ಆದರೆ ಈ ಖಾಯಿಲೆಯನ್ನು ನಿವಾರಣೆ ಮಾಡುವುದಕ್ಕೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾವುದೇ ರೀತಿ ಸೌಲಭ್ಯಗಳು ಇಲ್ಲ. ತಮಗೆ ಹೇಳಬೇಕಾದರೆ, ಇವತ್ತು ಪಟ್ಟಣಗಳಲ್ಲಿ ಸುಮಾರು 20 ಪರ್ಸೆಂಟ್ ಜನರು ಈ ಖಾಯಿಲೆಯಿಂದ ನರಳುತ್ತಿದ್ದಾರೆ. ಇವತ್ತು ನಮ್ಮ ಬೆಂಗಳೂರು ನಗರದಲ್ಲಿ ಈ ಖಾಯಿಲೆಯಿಂದ ಸುಮಾರು 200 ಜನರು ಕಣ್ಣು ಕಳೆದುಕೊಂಡಿದ್ದಾರೆ. ನಾನು ತಮ್ಮ ಮುಖಾಂತರ ಕೇಳಿಕೊಳ್ಳುವುದೇನೆಂದರೆ, ಕಲ್ಕತ್ತ, ಬಾಂಬೆ, ದೆಹಲಿ ಮತ್ತು ತ್ರೀವೆಂಡ್ರಂನಲ್ಲಿ ಕ್ಷಯರೋಗ, ಆರ್ಬುದರೋಗಗಳಿಗೆ ಇನ್‌ಟಿನ್‌ಸೀವ್ ಸ್ಪೆಷನ್ ಟ್ರೀಟ್‌ಮೆಂಟ್ ಕೊಡುವ ವ್ಯವಸ್ಥೆ ಮಾಡಿದ್ದಾರೆ. ನಮ್ಮ ರಾಜ್ಯಸರ್ಕಾರ ಕೂಡ ಆ ರೀತಿಯ ಟ್ರೀಟ್‌ಮೆಂಟ್ ಕೊಡುವ ವ್ಯವಸ್ಥೆ ಮಾಡಬೇಕು. ಮಾನ್ಯ ಸದಸ್ಯರಾದ ಮಾಣಿಕ್‌ರಾವ್ ಪಾಟೀಲ್‌ರವರು ಬಾಂಬೆಗೆ ಹೋಗಿ ಬಂದಿದ್ದಾರೆ. ನಮ್ಮಲ್ಲೂ ಕೂಡ ಅದರ ಬಗ್ಗೆ ಆಸಕ್ತಿವಹಿಸಿ ಸರ್ಕಾರ ಏನಾದರೂ ಒಂದು ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.—ಮಂತ್ರಿಗಳು ಸಹ ಪತ್ರ ಬರೆದಿದ್ದಾರೆ, ಅವರು ಊರಿನಲ್ಲಿಲ್ಲ. ಮಾನ್ಯ ಕಾನೂನು ಸಚಿವರು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತನ್ನಿ.

ಶ್ರೀ ಎ. ಲಕ್ಷ್ಮೀಸಾಗರ್.—ಆರೋಗ್ಯ ಇಲಾಖೆಯವರು ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದು ಕೊಂಡಿದ್ದಾರೆಂಬುದನ್ನು ತಿಳಿದುಕೊಂಡು, ಇದುವರೆಗೆ ಇದರ ಬಗ್ಗೆ ಯಾವುದೇ ಕಾರ್ಯಕ್ರಮ ತೆಗೆದು ಕೊಳ್ಳದಿದ್ದರೆ ತೀವ್ರವಾಗಿ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಅವರಿಗೆ ತಿಳಿಸುತ್ತೇನೆ.

(iv) DPAR ನವರ ಇನ್ಸ್‌ಪೆಕ್ಷನ್ ವರದಿಯ ಒದಗಿಸುವಿಕೆ

ಶ್ರೀ ಬಿ.ಜಿ. ಬಣಕಾರ.-ಡಿಪಾರ್ಟ್‌ಮೆಂಟ್ ಆಫ್ ಪರ್ಸೊನಲ್ ಅಂಡ್ ಆಡ್ಮಿನಿಸ್ಟ್ರೇಟಿವ್ ರಿಫಾರ ಮ್ಸ್‌ನಲ್ಲಿ ಇನ್ಸ್‌ಪೆಕ್ಷನ್ ವಿಂಗ್ ಎಂದು ಮಾಡಿದ್ದಾರೆ. ಇನ್ಸ್‌ಪೆಕ್ಷನ್‌ನವರು ಇನ್ಸ್‌ಪೆಕ್ಷನ್‌ಮಾಡಿ 1974 ರಿಂದ 1981ರವರೆಗೆ ರಾಜ್ಯದ ಆಡಳಿತ ವರದಿಯನ್ನು ತಯಾರು ಮಾಡಿದ್ದಾರೆ. ಆ ವರದಿಯನ್ನು ಪ್ರಿಂಟ್‌ಮಾಡಿ ಸದನದ ಮುಂದೆ ಇಡುತ್ತೇವೆಂದು ಕಳೆದ ಸಾರಿ ಹೇಳಿದ್ದಾರೆ. ಸರ್ಕಾರದ ಆಡಳಿತದಲ್ಲಿ ಏನೇನು ಲೋಪದೋಷಗಳಿವೆ ಅವುಗಳನ್ನು ಸರಿಪಡಿಸಲಿಕ್ಕೆ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ; ಅದು ಸದಸ್ಯರ ಕರ್ತವ್ಯ. ಶಾಸಕರಿಗೆ ಇದುವರೆಗೆ ಆ ವರದಿಯನ್ನು ಏತಕ್ಕೆ ಸಪ್ಲೈ ಮಾಡಲಿಲ್ಲ ಎನ್ನುವುದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಅದನ್ನು ನೋಡುತ್ತೇನೆ.

(v) Assistance and Relief to be provided to tobacco growers of Chikkodi Hukkri and is Nippani

Sri A.A. Nimbalkar.—Mr. Speaker Sir, hardship is caused to tobacco growers of Chikodi, Hukkeri and also Nipani particularly due to the unseasonal rains on 12th and 13th February, 1984 resulting in damage and wash out of tobacco. I urge the Government (1) to convert agricultural loans obtained through national and commercial banks and primary agricultural societies into medium term loans ; (2) to advance fresh loans for agricultural operations; (3) to extend time for recovery of all types of loans ; (4) direct the Karnataka State Tobacco Marketing and Processing Corporation to purchase the tobacco and (5) to pay minimum support price and subsidy due to farmers should be given through various societies and banks.

Sri R.L. Jalappa.—ಮಾನ್ಯ ಅಧ್ಯಕ್ಷರೆ, ಹೊಗೆಸೊಪ್ಪು ಮಳೆ ಬಂದು ಕೆಟ್ಟಿರುವ ಬಗ್ಗೆ ನಮಗೆ ಜಿಲ್ಲಾಧಿಕಾರಿಗಳಿಂದ ವರದಿ ಬಂದಿಲ್ಲ. ಜಿಲ್ಲಾಧಿಕಾರಿಗಳಿಂದ ವರದಿ ಬಂದ ತಕ್ಷಣ ಮಿಡಿಯಂ ಲೋನ್‌ಗೆ ಕನ್‌ವರ್ಟ್ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳಲಾಗುತ್ತದೆ. ಮಾನ್ಯ ಸದಸ್ಯರು ಪುನ: ಸಾಲ ಕೊಡಬೇಕೆಂದು ಹೇಳಿದ್ದಾರೆ. ಅದನ್ನು ಕೊಡಬಹುದು. ಜಿಲ್ಲಾಧಿಕಾರಿಗಳ ಪರಿಸ್ಥಿತಿ ಬಹಳ ಕೆಟ್ಟದಿದೆ ಸಾಲವನ್ನು ಹಂತಿರುಗಿಸುವುದಕ್ಕೆ ಶಕ್ತಿಯಿಲ್ಲವೆಂದು ವರದಿಯನ್ನು ಕಳುಹಿಸಿದರೆ ಮಿಡಿಯಂ ಲೋನ್‌ಗೆ ಕನ್‌ವರ್ಟ್ ಮಾಡಿ, ಸಾಲ ಕೊಡಬಹುದು. ಕರ್ನಾಟಕ ಟೊಬ್ಯಾಕೋ ಮಾರ್ಕೆಟಿಂಗ್ ಪ್ರೊಸೆಸಿಂಗ್ ಕಾರ್ಪೊರೇಷನ್ ಇದೆ. ಅದು ಯಾವುದೋ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದು ನನಗೆ ಗೊತ್ತಿಲ್ಲ. ಹೊಗೇಸೊಪ್ಪಿನ ಅಭಿವೃದ್ಧಿಗೋಸ್ಕರ ನಬಾರ್ಡ್‌ನಿಂದ ಒಂದೂವರೆ ಕೋಟಿ ರೂಪಾಯಿ ಮಂಜೂರು ಮಾಡಿಸಿಕೊಂಡಿದ್ದೇವೆ. ನಮ್ಮಲ್ಲಿ ಹೊಗೇಸೊಪ್ಪಿನ ಎಕ್ಸ್‌ಪರ್ಟ್ಸ್ ಇಲ್ಲ. ಹೊಗೇಸೊಪ್ಪಿನ ರೇಟು ಎಷ್ಟು. ಎಷ್ಟು ಹಣ ಖರ್ಚುಮಾಡಬೇಕು, ಅದು ಯಾವುದು ನಮ್ಮಲ್ಲಿ ಇಲ್ಲ. ನಮ್ಮಲ್ಲಿರುವ ಸ್ಟಾಕ್‌ನ್ನು ಮಾರಾಟ ಮಾಡಲಿಕ್ಕೆ ತೊಂದರೆ ಪಡುತ್ತಿದ್ದೇವೆ. ಈ ಬಗ್ಗೆ ಮೂರು ಜನರ ಒಂದು ಸಬ್ ಕಮಿಟಿಯನ್ನು ಸರ್ಕಾರದ ಮಟ್ಟದಲ್ಲಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆ ಕಮಿಟಿಯಲ್ಲಿ ಅಲ್ಲಿನ ಮ್ಯಾನೇಜಿಂಗ್ ಡೈರೆಕ್ಟರ್ ಅಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್‌ನ ಜಾಯಿಂಟ್ ಡೈರೆಕ್ಟರ, ಮತ್ತು ಟೊಬ್ಯಾಕೋ ಬೆಳೆಯತಕ್ಕವರ ಒಬ್ಬರು ಪ್ರತಿನಿಧಿ ಇರುತ್ತಾರೆ. ಆ ಕಮಿಟಿಯವರು ಇರತಕ್ಕ ಟೊಬ್ಯಾಕೋವನ್ನು ಯಾವರೀತಿ ಮಾರಾಟ ಮಾಡಬೇಕು, ಒಂದೂವರೆ ಕೋಟಿ ರೂಪಾಯಿಯನ್ನು ರೈತರಿಗೆ ಯಾವರೀತಿ ಕೊಡಬೇಕು. ಇದನ್ನೆಲ್ಲಾ ಯೋಚಿಸುತ್ತಾರೆ. ನಬಾರ್ಡ್ ಸಂಸ್ಥೆಯಿಂದ ಒಂದೂವರೆ ಕೋಟಿ ರೂಪಾಯಿ ಕೊಟ್ಟಿದ್ದಾರೆ. ಆ ಹಣವನ್ನು ಉಪಯೋಗಿಸಿಕೊಂಡು ಕನ್ಸೂಮರ್ ಪ್ರಾಡಕ್ಟ್ ನಲ್ಲಿ ಹೊಗೇಸೊಪ್ಪು ಇದ್ದರೆ ಅದನ್ನು ಪರ್ಚೇಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.